ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕ: 04.01.2024.

**ಪಾಟೀ ಸವಾಲು: ವಾದಿ ಪರ ವಕೀಲರಿಂದ:**

ವಾದಿ ತಂದೆ ಅಬ್ದುಲ್ ಅಲಿ ರವರು ದಾವಾ ಸ್ವತ್ತಿನ ಜಮೀನನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಮೊದಲು ದಾವಾ ಸ್ವತ್ತು ಗುಡುಮಾ ಮುಲ್ಲಾ ರವರಿಗೆ ಸೇರಿತ್ತು ಎಂದರೆ ಸರಿ. ದಾವಾ ಸ್ವತ್ತನ್ನು ಖರೀದಿಸಿ ಸುಮಾರು 50 ವರ್ಷವಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ವಾದಿ ತಂದೆ ಅಬ್ದುಲ್ ಅಲಿ ರವರು ಖರೀದಿ ಮಾಡಿದ ಖರೀದಿ ಪತ್ರವನ್ನು ನಾನು ನೋಡಿಲ್ಲ. ವಾದಿ ತಂದೆ ಅಬ್ದುಲ್ ಅಲಿ ರವರು ಖರೀದಿ ಪತ್ರದ ಪ್ರಕಾರ 4 ಎಕರೆ 18 ಗುಂಟೆ ಜಮೀನನ್ನು ಖರೀದಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ಪೂರ್ವಕ್ಕೆ ಮಸ್ತಾನ ಜಮೀನು ಇದೆ ಎಂದರೆ ಸರಿ, ಪಶ್ಚಿಮಕ್ಕೆ ದೂಳು ಹರಿಜನ ಇರುತ್ತಾನೆ ಎಂದರೆ ನನಗೆ ಗೊತ್ತಿಲ್ಲ, ಉತ್ತರಕ್ಕೆ ಇಮಾಮ್ ಮುಲ್ಲಾ ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ, ದಕ್ಷಿಣಕ್ಕೆ ಚಂದುಲಾಲ್ ಹೊಲ ಇದೆ ಎಂದರೆ ನನಗೆ ಗೊತ್ತಿಲ್ಲ.

ನನ್ನ ಊರು ಮತ್ತು ದಾವಾ ಸ್ವತ್ತು ಇದ್ದ ಊರು ಬೇರೆ-ಬೇರೆ ಎಂದರೆ ಸರಿ. ದಾವಾ ಸ್ವತ್ತಿನಿಂದ ನನ್ನ ಜಮೀನು ಸುಮಾರು ಅರ್ಧ ಕಿ.ಮೀ. ಅಂತರ ಇರುತ್ತದೆ. ನನ್ನ ಜಮೀನಿಗೆ ಹೋಗುವಾಗ ದಾವಾ ಸ್ವತ್ತು ಸಂಬಂಧಪಡುವುದಿಲ್ಲ ಎಂದರೆ ಸರಿ. ಪ್ರತಿವಾದಿ ಮಕ್ಕಳು ನನಗೆ ಅಣ್ಣ-ತಮ್ಮಂದಿರು ಆಗಬೇಕು. ನನ್ನ ಮುಖ್ಯ ವಿಚಾರಣೆಯಲ್ಲಿ ನಾನು ವಾದಿ ತಂದೆ ಸರ್ವೆ ನಂ.27 ರಲ್ಲಿ 2 ಎಕರೆ 18 ಗುಂಟೆ ಖರೀದಿ ಮಾಡಿರುತ್ತಾನೆ ಎಂದು ಬರೆದ ಸಂಗತಿ ನನಗೆ ಗೊತ್ತಿಲ್ಲ. ಪ್ರತಿವಾದಿ ಮಕ್ಕಳು ನನಗೆ ವಾದಿ ತಂದೆ ಅಬ್ದುಲ್ ಅಲಿ ರವರು 2 ಎಕರೆ 18 ಗುಂಟೆ ಮಾತ್ರ ಖರೀದಿಸಿರುತ್ತಾರೆ ಎಂದು ಹೇಳಿದ ಮೇರೆಗೆ ಆ ರೀತಿ ಸಾಕ್ಷಿ

ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ಪ್ರತಿವಾದಿಯರು ಜಮೀನುಗಳ ಪಹಣಿಗಳನ್ನು ನಾನು ನೋಡಿಲ್ಲ. ಈ ಕೇಸ್ ಸಂಬಂಧ ಮತ್ತು ದಾವಾ ಸ್ವತ್ತಿನ ಸಂಬಂಧ ನನಗೆ ಏನು ಗೊತ್ತಿಲ್ಲ ಎಂದರೆ ಸರಿ.

**ಮರು ವಿಚಾರಣೆಃ** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**